ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆ/ಪಿಎಸ್ಆರ್( )/ 21 /2019-2020

ಆಯುಕ್ತರವರ ಕಛೇರಿ
ಎನ್.ಆರ್.ವೃತ್ತ, ಬೆಂಗಳೂರು-02
ದಿನಾಂಕ: 13-01-2020

# "ಸುತ್ತೋಲೆ"

ವಿಷಯ: ಅನಧೀಕೃತ ಓ.ಎಫ್.ಸಿ. ಕೇಬಲ್ ನಿರ್ಮೂಲನ ಕುರಿತು - ಶ್ರೀ ಜಗನ್ ಕುಮಾರ್ ರವರು ಅನಧಿಕೃತವಾಗಿ ಮರಗಳ ಮೇಲೆ ಹಾಗೂ ವಿದ್ಯುತ್ ಕಂಬಗಳ ಮೇಲೆ ಮತ್ತು ಪಾದಚಾರಿಗಳಲ್ಲಿ ಅಳವಡಿಸಿರುವ ಓ.ಎಫ್.ಸಿ ಕೇಬಲ್‌ಗಳು ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರರಿಗೆ ಪ್ರಾಣ ಅಪಾಯವಾಗಿರುವುದಾಗಿ ತಿಳಿಸಿ ಮಾನವ ಹಕ್ಕು ಆಯೋಗರವರಿಗೆ ಸಲ್ಲಿಸಿರುವ ದೂರಿನ ಬಗ್ಗೆ.

ಉಲ್ಲೇಖ:

1. ಮಾನ್ಯ ಆಯುಕ್ತರವರ ಸುತ್ತೋಲೆ ಸಂಖ್ಯೆ: ಆ/ಪಿಆರ್/3385/2014-15, ದಿನಾಂಕ: 01-08-2014.
2. ಮಾನ್ಯ ಆಯುಕ್ತರವರ ಆಂತರಿಕ ಕಛೇರಿ ಆದೇಶ ಸಂಖ್ಯೆ: ಆ/ಪಿಆರ್/8234/2015-16, ದಿನಾಂಕ: 18-12-2014,
3. ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿ ಪತ್ರ ಸಂಖ್ಯೆ: ಮು.ಅ/ಓ.ಎಫ್.ಸಿ/ಪಿಆರ್/752/2016-17, ದಿನಾಂಕ: 31-01-2017.
4. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಆಯುಕ್ತರು/ಪಿಎಸ್ಆರ್(ಜಿ)/1080/2017-18, ದಿನಾಂಕ: 17-05-2017
5. ಮಾನ್ಯ ಆಯುಕ್ತರವರ ಸುತ್ತೋಲೆ ಸಂಖ್ಯೆ: ಪ್ರ/ಪಿಆರ್/316/2017-18, ದಿನಾಂಕ: 13-07-2017
6. ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿ ಪತ್ರ ಸಂಖ್ಯೆ: ಮು.ಅ/ಓ.ಎಫ್.ಸಿ/ಪಿಆರ್/899/2017-18, ದಿನಾಂಕ: 04-11-2017
7. ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿ ಪತ್ರ ಸಂಖ್ಯೆ: ಮು.ಅ/ಓ.ಎಫ್.ಸಿ/ಪಿಆರ್/972/2017-18, ದಿನಾಂಕ: 08-12-2017,
8. ವಿಶೇಷ ಆಯುಕ್ತರು (ಯೋಜನೆ)ರವರ ಆಂತರಿಕ ಕಛೇರಿ ಆದೇಶ ಸಂಖ್ಯೆ: ವಿ.ಆ(ಯೋ)/ಪಿಆರ್/6365/2017-18, ದಿನಾಂಕ: 18-12-2017
9. ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿ ಪತ್ರ ಸಂಖ್ಯೆ: ಕಾ.ಪಾ.ಅ/ಓ.ಎಫ್.ಸಿ/ಪಿಆರ್/17, ದಿನಾಂಕ: 14-03-2018
10. ಆಯುಕ್ತರು ಆಂತರಿಕ ಕಛೇಲಿ ಆದೇಶ ಪತ್ರ ಸಂಖ್ಯೆ: ವಿ.ಆ(ಯೋ)/ಪಿಆರ್/1982/2018-19, ದಿನಾಂಕ: 17-07-2018.
11. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಆ/ಪಿ.ಎಸ್.ಆರ್ (ಜಿ)2971/ 18-19, ದಿನಾಂಕ: 28-09-2018,
12. ವಿಶೇಷ ಆಯುಕ್ತರು (ಯೋಜನೆ)ರವರ ಆಂತರಿಕ ಕಛೇರಿ ಆದೇಶ ಪತ್ರ ಸಂಖ್ಯೆ: ಐ.ಆ (ಯೋ)/ ಸಿಆರ್/6142/2018-19, ದಿನಾಂಕ: 09-01-2019
13. ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿ ಪತ್ರ ಸಂಖ್ಯೆ: ಮು.ಅ(ಓ.ಎಫ್.ಸಿ)/ಪಿಆರ್/439/2018-19 ದಿನಾಂಕ: 27-02-2019.
14. Karnataka State Human Rights Commission letter No: HRC No: 1079/10/ 31/2019 (SB-1) Date: 21-03-2019 address to Commissioner, BBMP
15. ಪ್ರಧಾನ ಅಭಿಯಂತರರ ಆಂತರಿಕ ಕಛೇರಿ ಆದೇಶ ಪತ್ರ ಸಂಖ್ಯೆ: ಪ್ರ.ಅ/

ಸಿಆರ್/1545/2018-19, ದಿನಾಂಕ: 22-03-2019

16. ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿ ಪತ್ರ ಸಂಖ್ಯೆ: ಮು.ಅ(ಓ.ಎಫ್.ಸಿ)/ಪಿಆರ್/461/2018-19 ದಿನಾಂಕ: 23-03-2019.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಜಗನ್ ಕುಮಾರ್ ರವರು ಅನಧಿಕೃತವಾಗಿ ಮರಗಳ ಮೇಲೆ ಹಾಗೂ ವಿದ್ಯುತ್ ಕಂಬಗಳ ಮೇಲೆ ಮತ್ತು ಪಾದಚಾರಿಗಳಲ್ಲಿ ಅಳವಡಿಸಿರುವ ಓ.ಎಫ್.ಸಿ ಕೇಬಲ್‌ಗಳು ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರರಿಗೆ ಪ್ರಾಣ ಅಪಾಯವಾಗಿರುವುದಾಗಿ ತಿಳಿಸಿ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗರವರಿಗೆ ದಿನಾಂಕ: 08-03-2019 ರಂದು ದೂರನ್ನು ಸಲ್ಲಿಸಿದ್ದು, ಈ ಸಂಬಂಧ ದೂರಿನ ಸಂಖ್ಯೆ: HRC No: 1079/10/ 31/2019 (SB-1) ರಲ್ಲಿ ಮಾನವ ಹಕ್ಕು ಆಯೋಗದ ಪೀಠ-1 ರಲ್ಲಿ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸಲಾಗುತ್ತಿದೆ. ಈ ಬಗ್ಗೆ ಆಯೋಗವು ಭೂಮಿಯ ಮೇಲ್ಮಟ್ಟದಲ್ಲಿರುವ ಎಲ್ಲಾ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಿ ಮಾಹಿತಿಯನ್ನು ಆಯೋಗಕ್ಕೆ ಒದಗಿಸುವಂತೆ ಸೂಚಿಸಿದೆ. ಈ ಬಗ್ಗೆ ಮಾನ್ಯ ಆಯುಕ್ತರು ದಿನಾಂಕ 06-01-2020ರ ಉನ್ನತಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಕ್ರಮ ಕೈಗೊಂಡು ವರದಿಯನ್ನು ಮಾನ್ಯ ಆಯೋಗಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಈಗಾಗಲೇ ಬಿಎಂಪಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ 8 ವಲಯಗಳಲ್ಲಿ ಅನಧಿಕೃತವಾಗಿ ಓ.ಎಫ್.ಸಿ ಕೇಬಲ್‌ಗಳನ್ನು ಮರಗಳ ಮೂಲಕ, ವಿದ್ಯುತ್ ಕಂಬಗಳ ಮೂಲಕ ಮತ್ತು ದೂರವಾಣಿ ಸಂಪರ್ಕದ ಕಂಬಗಳ ಮೂಲಕ ಹಾಯಿಸಿರುವುದು ಮತ್ತು ತೆರವುಗೊಳಿಸದೆ ರಸ್ತೆಗಳಲ್ಲಿ ಬಿಡಿ ಬಿಡಿಯಾಗಿ ಬಿದ್ದಿರುವ ಕೇಬಲ್‌ಗಳನ್ನು ತೆರವುಗೊಳಿಸಲು ತುರ್ತು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿ ಈ ಕಛೇರಿ ಉಲ್ಲೇಖ ಪತ್ರ ಕ್ರಮ ಸಂಖ್ಯೆ: (01) ರಿಂದ (16) ರವರೆಗೆ ಪತ್ರಗಳಲ್ಲಿ ಹಲವಾರು ಬಾರಿ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಆಯ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಅನಧಿಕೃತವಾಗಿ ಓ.ಎಫ್.ಸಿ ಅಳವಡಿಸದಂತೆ ತಡೆಯುವ, ಅಧಿಕೃತ ಓ.ಎಫ್.ಸಿ. ಅಳವಡಿಕೆಯ ಮೇಲ್ವಿಚಾರಣೆ ಮಾಡುವ ಮತ್ತು ಅನಧಿಕೃತವಾಗಿ ಅಳವಡಿಸಲಾಗಿರುವ ಓ.ಎಫ್.ಸಿ. ಗಳನ್ನು ತೆರವುಗೊಳಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ವಾರ್ಡ್‌ಗಳ ಸಹಾಯಕ ಮತ್ತು ಕಿರಿಯ ಅಭಿಯಂತರರಿಗೆ ನೀಡಲಾಗಿದ್ದು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಡ್ಡಾಯವಾಗಿ ಮತ್ತು ನಿಯಮಿತವಾಗಿ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡತಕ್ಕದ್ದು ಎಂದು ಈಗಾಗಲೇ ನಿಯಮ ರೂಪಿಸಲಾಗಿದ್ದು ಅನುಮೋದಿತ ಓ.ಎಫ್.ಸಿ.ಅಳವಡಿಕೆ ಸಾಮಾನ್ಯ ಕಾರ್ಯವಿಧಾನದಲ್ಲಿ ಕೂಡ ಅನಧಿಕೃತವಾಗಿ ಓ.ಎಫ್.ಸಿ ಅಳವಡಿಸದಂತೆ ತಡೆಯುವ ಜವಾಬ್ದಾರಿಯನ್ನು ವಲಯ ಕಾಮಗಾರಿ ಇಲಾಖೆಗಳಿಗೆ ನಿಗದಿಪಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಮಾನವ ಹಕ್ಕು ಆಯೋಗದ ಆದೇಶದ ಪಾಲನೆಗಾಗಿ ಎಲ್ಲಾ 8 ವಲಯ ವ್ಯಾಪ್ತಿಯಲ್ಲಿ ಭೂಮಿಯಿಂದ ಮೇಲ್ಮಟ್ಟದಲ್ಲಿರುವ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಿ ಈ ಸಂಬಂಧ ವಲಯ ಮಟ್ಟದಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಗಳನ್ನು ಕ್ರೋಢೀಕರಿಸಿ ಲಗತ್ತಿಸಿರುವ ನಮೂನೆಯಲ್ಲಿ ತಯಾರಿಸಿ ವಲಯಗಳ ಜಂಟಿ ಆಯುಕ್ತರು ರಾಜ್ಯ ಮಾನವ ಹಕ್ಕು ಆಯೋಗದ ಮುಂದಿನ ವಿಚರಣೆಯ ದಿನದಂದು ಖುದ್ದಾಗಿ ಹಾಜರಾಗಿ ತಮ್ಮ ವಲಯಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸತಕ್ಕದ್ದು ಮತ್ತು ಈ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ವಹಿಸಲು ವಲಯ ಆಯುಕ್ತರವರಿಗೆ ಸೂಚಿಸಿದೆ. ಮುಂದಿನ ವಿಚಾರಣೆಯು 24-01-2020 ರಂದು ನಿಗಧಿ ಪಡಿಸಿರುವ ಪ್ರಯುಕ್ತ ತುರ್ತಾಗಿ ಕ್ರಮವಹಿಸಲು ಮತ್ತು ಮಾಹಿತಿ ಸಂವಹನ ಸೂಕ್ತವಾಗಿ ಜರುಗುವಂತೆ ನೋಡಿಕೊಳ್ಳಲು ಸೂಚಿಸಿದೆ. ಈ ಬಗ್ಗೆ ವಲಯಗಳ ವರದಿಯ ಪ್ರತಿಯನ್ನು ದಿನಾಂಕ 23-01-2020ರ ಪೂರ್ವಾಹ್ನ 11:00 ಘಂಟೆಯೊಳಗಾಗಿ ಪ್ರಧಾನ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು (ಓ.ಎಫ್.ಸಿ.) ಕಛೇರಿಗೆ

ನಮೂನೆ ಮತ್ತು ಛಾಯಾಚಿತ್ರಗಳೊಡನೆ ಸಲ್ಲಿಸತಕ್ಕದ್ದು ಮತ್ತು ಸಂಬಂಧಪಟ್ಟ ಜಂಟಿ ಆಯುಕ್ತರು ಇದಕ್ಕೆ ಹೊಣೆಗಾರರಾಗಿರುತ್ತಾರೆ.

ಸಂಬಂಧಪಟ್ಟ ಅಭಿಯಂತರರಿಗೆ ನಿಗಧಿತ ಕಾಲಮಿತಿಯಲ್ಲಿ ಭೂಮಿಯ ಮೇಲ್ಮಟ್ಟದ ಅನಧಿಕೃತ ಓ.ಎಫ್.ಸಿ ಅಳವಡಿಕೆ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚಿಸಿದೆ. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿರುವುದು ಅಥವಾ ಆದೇಶವನ್ನು ಉಪೇಕ್ಷಿಸಿರುವುದು ಅಥವಾ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದು ಕಂಡುಬಂದಲ್ಲಿ ಸಂಬಂಧಪಟ್ಟ ಅಭಿಯಂತರರನ್ನು ಮತ್ತು ಇತರ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ಆಯುಕ್ತರು 10/1/2021
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿ:

1. ಎಲ್ಲಾ ವಲಯದ ಆಯುಕ್ತರವರಿಗೆ ಸೂಕ್ತ ಕ್ರಮಕ್ಕಾಗಿ
2. ವಿಶೇಷ ಆಯುಕ್ತರು(ಯೋಜನೆ) ರವರಿಗೆ ಸೂಕ್ತ ಕ್ರಮಕ್ಕಾಗಿ
3. ಎಲ್ಲಾ ವಲಯ ಅಪರ/ಜಂಟಿ ಆಯುಕ್ತರವರಿಗೆ – ಸೂಕ್ತ ಕ್ರಮಕ್ಕಾಗಿ.
4. ಎಲ್ಲಾ ವಲಯಗಳ ಮುಖ್ಯ ಅಭಿಯಂತರರು – ಸೂಕ್ತ ಕ್ರಮಕ್ಕಾಗಿ.
5. ಪ್ರಧಾನ ಅಭಿಯಂತರರು ಸೂಕ್ತ ಕ್ರಮಕ್ಕಾಗಿ
6. ಮುಖ್ಯ ಅಭಿಯಂತರರು (ಓ.ಎಫ್.ಸಿ.) ಸೂಕ್ತ ಕ್ರಮಕ್ಕಾಗಿ
7. ಮುಖ್ಯಸ್ಥರು (ಕಾನೂನು ಕೋಶ)
8. ಕಛೇರಿ ಕಡತಕ್ಕೆ.

| | | | | | |
|---|---|---|---|---|---|
| ವಾರ್ಡ್ ಸಂಖ್ಯೆ | | | ವಾರ್ಡ್ ಹೆಸರು | | |
| ಉಪವಿಭಾಗ | | | | ವಿಭಾಗ | |
| ವಲಯ | | | | | |
| ಕ್ರ.ಸಂ. | ರಸ್ತೆ | ಎಲ್ಲಿಂದ | ಎಲ್ಲಿಯವರೆಗೆ | ಉದ್ದ | ಸಂಸ್ಥೆ |
| 1 | | | | | |
| 2 | | | | | |
| ... | | | | | |
| | ಒಟ್ಟು | | | | |

ತೆರವು ಕಾರ್ಯಾಚರಣೆಯ ಛಾಯಾಚಿತ್ರಗಳನ್ನು ಲಗತ್ತಿಸುವುದು.